ದಿನಾಂಕ 03.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆ.ಆರ್.ಎಸ್., ವಕೀಲರಿಂದಃ-**

**11.** ನನಗೆ ಮದುವೆಯಾಗಿ 12 ವರ್ಷ ಆಯಿತು. ನನಗೆ ಒಬ್ಬ ಮಗ ಇದ್ದಾನೆ. ಆತ 5 ನೇ ತರಗತಿ ಓದುತ್ತಿದ್ದಾನೆ. ಆತನ ವಿದ್ಯಾಭ್ಯಾಸಕ್ಕೆ ವರ್ಷಕ್ಕೆ ರೂ.40,000/- ಗಳು ಖರ್ಚು ಬರುತ್ತದೆ. ಆತನು ಮನೆಯಿಂದಲೇ ಶಾಲೆಗೆ ಹೋಗಿ ಬರುತ್ತಾನೆ.

**12.** ನಾನು ಈ ಮೊದಲು ಕಂಡಿಕೆ-7 ರಲ್ಲಿ ಹೇಳಿದ ಭಾನು ಪ್ರತಾಪ್‌ನ ತಂದೆಯ ಹೆಸರು ರಾಮಾನುಜಿ. ಭಾನು ಪ್ರತಾಪ್‌ನ್ನನ್ನು ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿಸಲು ನನಗೇನೂ ತೊಂದರೆ ಇಲ್ಲ. ರೂ.20,000/-ಕ್ಕಿಂತ ಮೇಲ್ಪಟ್ಟ ಹಣವನ್ನು ಚೆಕ್ಕು ಮೂಲಕವೇ ಮಾಡಬೇಕು ಎನ್ನುವುದು ನನಗೆ ಗೊತ್ತಿದೆ.

**13.** ಕಂಡಿಕೆ-4 ಮತ್ತು 5 ರಲ್ಲಿ ಹೇಳಿದ ಶರತ್‌ನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಅವರು ಪೂರ್ಣ ಹೆಸರು ಶರತ್.ಡಿ.ಆರ್. ಬಿನ್ ರಾಜೇಗೌಡ ಎಂದರೆ ನನಗೆ ಗೊತ್ತಿಲ್ಲ. ಶರತ್ ರವರು ಚಿಕ್ಕಮಗಳೂರಿನಲ್ಲಿ ನಿಖರವಾಗಿ ಎಲ್ಲಿ ವಾಸ ಮಾಡುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಈ ದೂರನ್ನು ಸಲ್ಲಿಸಲು ಮಾಹಿತಿಯನ್ನು ಸದ್ರಿ ಶರತ್ ರವರೇ ಕೊಟ್ಟಿದ್ದಾರೆ. ದೂರು ಸಲ್ಲಿಸಲು ನಾನೇ ಮಾಹಿತಿಯನ್ನು ಕೊಟ್ಟಿದ್ದೇನೆಂದು ಸಾಕ್ಷಿಯು ಮುಂದುವರೆದು ಹೇಳುತ್ತಾರೆ. ಆರೋಪಿಯ ಪೂರ್ಣ ವಿಳಾಸ ನನಗೆ ಗೊತ್ತಿಲ್ಲ. ಅವರು ಚಿಕ್ಕಮಗಳೂರಿನ ವಾಸಿ ಎಂದು ಮಾತ್ರ ನನಗೆ ಗೊತ್ತಿದೆ. ನನ್ನ ಬಾಬ್ತು RBL bank ನ statement ನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ದೂರವಾಣಿ ಕಂಪನಿಯವರು ಮಾಹಿತಿಯನ್ನು ಒದಗಿಸಿದರೆ ಶರತ್ ಮತ್ತು ಆರೋಪಿರವರ ಕರೆ ವಿವರಗಳನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನ್ಯಾಯಾಲಯಕ್ಕೆ ಸೂಕ್ತ ಅರ್ಜಿಯನ್ನು ಸಲ್ಲಿಸಿ ಅವರ ಕರೆ ವಿವರಗಳನ್ನು ತರಿಸಿಕೊಳ್ಳಲು ನನಗೇನೂ ತೊಂದರೆ ಇಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABC0C0493862024/truecopy/order-3.pdf

**14.** ಆರೋಪಿಗೆ ನೋಟೀಸನ್ನು ಕೊಡಿಸಿದ ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ನನ್ನ ನೋಟೀಸಿಗೆ ಆರೋಪಿಯು ಕೊಟ್ಟ ನಿಪಿ.6 ಉತ್ತರದಲ್ಲಿ ಏನು ಬರೆದಿದ್ದಾರೆನ್ನುವ ಮಾಹಿತಿ ನನಗೆ ಗೊತ್ತಿಲ್ಲ. ಉತ್ತರದ ನೋಟೀಸಿನ ದಿನಾಂಕ ನನಗೆ ಗೊತ್ತಿಲ್ಲ.

**15.** ಶರತ್ ರವರು ಚಿಕ್ಕಮಗಳೂರಿನಲ್ಲಿ 2019-20 ರಲ್ಲಿ ಚೀಟಿ ವ್ಯವಹಾರ ಮಾಡುತ್ತಿದ್ದರು ಎನ್ನುವ ವಿಷಯ ನನಗೆ ಗೊತ್ತಿಲ್ಲ. ಅವರು ರೂ.2,00,000/- ಹಣದ ಒಂದು ಚೀಟಿ ಮತ್ತು ರೂ.3,00,000/- ಹಣದ ಇನ್ನೊಂದು ಚೀಟಿಯನ್ನು ನಡೆಸುತ್ತಿದ್ದ ವಿಷಯ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಆ ಚೀಟಿ ವ್ಯವಹಾರದ ಸಲುವಾಗಿ ಶರತ್‌ರವರು ಆರೋಪಿಯಿಂದ ಭದ್ರತೆಗಾಗಿ ಪಡೆದು 6 ಚೆಕ್ಕುಗಳ ಪೈಕಿ ನಿಪಿ.1 ಚೆಕ್ಕು ಕೂಡಾ ಒಂದು ಎಂದರೆ ಸರಿಯಲ್ಲ.

**16.** ಆರೋಪಿಯೇ ನನಗೆ ಕರೆ ಮಾಡಿ ಸ್ವತಃ ಬೆಂಗಳೂರಿಗೆ ಬಂದು ನಿಪಿ.1 ಚೆಕ್ಕನ್ನು ಕೊಟ್ಟಿದ್ದಾರೆ. ನನ್ನ ಮೊಬೈಲ್ ಫೋನ್ ಕರೆ ವಿವರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಶರತ್ ಮತ್ತು ಆರೋಪಿಯ ಮಧ್ಯೆ ಚೀಟಿ ವ್ಯವಹಾರದ ಸಂಬಂಧ ಆದ ಮನಸ್ತಾಪದ ಹಿನ್ನೆಲೆಯಲ್ಲಿ ಅವರು ಆರೋಪಿಯಿಂದ ಪಡೆದ 6 ಚೆಕ್ಕುಗಳ ಪೈಕಿ ಒಂದು ಚೆಕ್ಕನ್ನು ಬಳಸಿಕೊಂಡು ಚಿಕ್ಕಮಗಳೂರು ನ್ಯಾಯಾಲಯದಲ್ಲಿ ಆರೋಪಿ ವಿರುದ್ಧ ಕೇಸು ಹಾಕಿದ ವಿಷಯ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಅದೇ ರೀತಿ ಗಣೇಶ್ ಎನ್ನುವವರ ಮೂಲಕ ಅರಸೀಕರೆ ನ್ಯಾಯಾಲಯದಲ್ಲಿ ಆರೋಪಿಯ ವಿರುದ್ಧ ಇನ್ನೊಂದು ಚೆಕ್ಕು ಅಮಾನ್ಯದ ಕೇಸನ್ನು ಹಾಕಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಶರತ್‌ರವರು ತಮ್ಮ ಸಂಬಂಧಿ ಬಸವರಾಜು ರವರ ಮೂಲಕ ಕಡೂರು ನ್ಯಾಯಾಲಯದಲ್ಲಿ ಆರೋಪಿಯ ವಿರುದ್ಧ ಇನ್ನೊಂದು ಚೆಕ್ಕು ಅಮಾನ್ಯದ ಕೇಸನ್ನು ಹಾಕಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಹಾಗೆಯೇ ರಂಗಧಾಮಯ್ಯ ಎನ್ನುವವರ ಮೂಲಕ ಶರತ್ ರವರು ಚಿಕ್ಕನಾಯಕನಹಳ್ಳಿ ನ್ಯಾಯಾಲಯದಲ್ಲಿ ಆರೋಪಿಯ ವಿರುದ್ಧ ಇನ್ನೊಂದು ಚೆಕ್ಕು ಅಮಾನ್ಯದ ಕೇಸನ್ನು ಹಾಕಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಮೈಸೂರು

This is a True Copy of the Court Records Online. Authenticated @ districts.ecourtsindia.com/cnr/KABC0C0493862024/truecopy/order-3.pdf
www.ecourtsindia.com

ನ್ಯಾಯಾಲಯದಲ್ಲಿಯೂ ಆರೋಪಿಯ ವಿರುದ್ಧ ಇನ್ನೊಂದು ಚೆಕ್ಕು ಅಮಾನ್ಯದ ಕೇಸನ್ನು ಹಾಕಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಆರೋಪಿಯು ನನ್ನನ್ನು ನ್ಯಾಯಾಲಯದಲ್ಲಿಯೇ ಪ್ರಥಮ ಬಾರಿ ನೋಡಿದ್ದಾರೆ, ಅದಕ್ಕೂ ಮೊದಲು ನನ್ನನ್ನು ಅವರು ಎಲ್ಲೂ ನೋಡಲಿಲ್ಲ ಎಂದರೆ ಸರಿ. ದೂರಿನಲ್ಲಿ ಹೇಳಿದ ಪ್ರಕಾರ ಆರೋಪಿಯು ನನ್ನಿಂದ ರೂ.5,00,000/- ಹಣವನ್ನು ಪಡೆದುಕೊಂಡಿಲ್ಲ ಮತ್ತು ನಿಪಿ.1 ಚೆಕ್ಕನ್ನು ಅವರು ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಒಂದೊಮ್ಮೆ ನಾನೇ ಅವರೊಂದಿಗೆ ವ್ಯವಹಾರ ಮಾಡಿದ್ದರೆ, ಸರಿಯಾದ ಮಾಹಿತಿ ನೀಡಿ ದೂರು ಸಲ್ಲಿಸುತ್ತಿದ್ದೆ ಎಂದರೆ ಸರಿಯಲ್ಲ. ಶರತ್ ಚಿತಾವಣೆಯ ಮೇರೆಗೆ ನಾನು ಆರೋಪಿಯ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಈ ಕೇಸಿನ ಬಾಬ್ತು ಸಂಪೂರ್ಣ ಖರ್ಚು-ವೆಚ್ಚಗಳನ್ನು ಶರತ್ ರವರೇ ಕೊಡುತ್ತಿದ್ದಾರೆಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.)
(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸ.ಇದೆ**

**14 ನೇ ಅ.ಮು.ನ್ಯಾ.ದಂ, ಬೆಂಗಳೂರು**

This is a True Copy of the Court Records Online. Authenticated @ districts.ecourtsindia.com/cnr/KABC0C0493862024/truecopy/order-3.pdf